# ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚನ್ನಪಟ್ಟಣ.

**ಸಿಸಿ ಸಂಖ್ಯೆ : 4018/2023**

| | | |
|---|---|---|
| **ಪಿರ್ಯಾದುದಾರರು** | : | ಶ್ರೀ.ಕೆ.ರಮೇಶ್ ಕುಮಾರ್,<br>ಬಿನ್ ಲೇಟ್ ನಾರಾಯಣನ್ ಪಿ.,<br>ವಯಸ್ಸು75 ವರ್ಷ,<br>ವಾಸಃ ಆರ್. ಆರ್ ಫಾರ್ಮ್ಸ್,<br>ಜೆ.ಬ್ಯಾಡರಹಳ್ಳಿ ಗ್ರಾಮ,<br>ಚನ್ನಪಟ್ಟಣ-ಹಲಗೂರು ಮುಖ್ಯ ರಸ್ತೆ,<br>ಕಾರೆಕೊಪ್ಪ ಗೇಟ್,<br>ಚನ್ನಪಟ್ಟಣ ತಾಲ್ಲೂಕು,<br>ರಾಮನಗರ ಜಿಲ್ಲೆ. |
| | | -ವಿರುದ್ಧ- |
| **ಆರೋಪಿ** | : | ಶ್ರೀ.ರಘುರಾಮ್,<br>ಬಿನ್ ಮಲ್ಲಿಕಾರ್ಜುನಯ್ಯ,<br>ವಯಸ್ಸು 43 ವರ್ಷ,<br>ವಾಸ : ಚನ್ನಮಾನಹಳ್ಳಿ ಗ್ರಾಮ,<br>ಅಂಜನಾಪುರ ಅಂಚೆ,<br>ಕೈಲಾಂಚ ಹೋಬಳಿ,<br>ರಾಮನಗರ ತಾಲ್ಲೂಕು ಮತ್ತು ಜಿಲ್ಲೆ. |

## ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಆರೋಪಿತನ ಹೇಳಿಕೆ

1. ನೀವು ಫಿರ್ಯಾದುದಾರ ಪರ ಸಾಕ್ಷ್ಯ ನುಡಿದಿರುವುದನ್ನು ಕೇಳಿರುವಿರಾ?
   ಉತ್ತರಃ

2. ಪ್ರಾಸಾ.1/ಶ್ರೀ.ಕೆ.ರಮೇಶ್ ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ಆರೋಪಿಯಾದ ನೀವು ಹಾಗೂ ಫಿರ್ಯಾದುದಾರರು ಸುಮಾರು ವರ್ಷಗಳಿಂದ ಪರಿಚಯಸ್ಥತರಾಗಿದ್ದು, ಈ ಪರಿಚಯದ ಮೇರೆಗೆ ಆರೋಪಿಯಾದ ನೀವು ವ್ಯವಹಾರದ ತೊಂದರೆ ನೀಗಿಸುವ ಸಲುವಾಗಿ ಹಣದ ಅವಶ್ಯಕತೆ ಇದೆ ಎಂದು ಪಿರ್ಯಾದುದಾರರನ್ನು ರೂ.**10,00,000/-**ಗಳನ್ನು ಸಾಲವಾಗಿ ಕೇಳಿದ್ದು, ಅವರು ಅದಕ್ಕೆ ಸದರಿ ಹಣವನ್ನು ಆರು ತಿಂಗಳ ಒಳಗೆ ಮರುಪಾವತಿ ಮಾಡುವಂತೆ ಹೇಳಿದ್ದು, ಆರೋಪಿತರಾದ ನೀವು ಒಂದು ವರ್ಷದ

ಕಾಲಾವಕಾಶ ಕೇಳಿ ಅದಕ್ಕೆ ಬಡ್ಡಿ ಕೊಡುವುದಾಗಿ ತಿಳಿಸಿ ನಂತರ ದಿಃ**19.11.2020** ರಂದು ಫಿರ್ಯಾದುದಾರರಿಂದ ರೂ.10,00,000/-ಗಳ ಹಣವನ್ನು ಪಿರ್ಯಾದುದಾರರ ಮನೆಯಲ್ಲಿ ಜೆ.ಬ್ಯಾಡರಹಳ್ಳಿ ಬಿ.ಎಂ.ಸಿದ್ಧರಾಮೆಗೌಡರವರ ಸಮಕ್ಷಮ ಸಾಲವಾಗಿ ಪಡೆದಿದ್ದು ಹಾಗೂ ಸದರಿ ಹಣಪಡೆದು ಹಣದ ಭದ್ರತೆಗಾಗಿ ಹಣ ಪಡೆದ ಬಗ್ಗೆ ಒಂದು ದಾಖಲಾತಿಯನ್ನು ಬರೆದು ಆರೋಪಿಯಾದ ನೀವು ಹಾಗೂ ಸಿದ್ಧರಾಮೆಗೌಡರವರು ಪಿರ್ಯಾದುದಾರರ ಸಮಕ್ಷಮ ಸಹಿ ಮಾಡಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ**?**

ಉತ್ತರಃ

**3.** ಪ್ರಾ.ಸಾ.1 ರವರು ಮುಂದುವರೆದು ನುಡಿಯುವುದೇನೆಂದರೆ, ಆರು ತಿಂಗಳ ನಂತರ ಅವರು ಆರೋಪಿಯಾದ ನಿಮ್ಮನ್ನು ಹಣವನ್ನು ಮರುಪಾವತಿಸುವಂತೆ ಕೇಳಿದಾಗ ಆರೋಪಿಯಾದ ನೀವು ದಿನಾಂಕಃ**02.01.2023** ರಂದು ರೂ.**7,00,000/-**ಗಳನ್ನು ಕೊಟ್ಟಿರುತ್ತೀರಿ ಹಾಗೂ ಉಳಿಕೆ ರೂ.**3,00,000/-**ಗಳಿಗೆ ಒಂದು ಚೆಕ್ ನೀಡಿ ಸಮಯ ಕೇಳಿರುತ್ತೀರಿ. ನಂತರ ಪಿರ್ಯಾದುದಾರರು ಒಪ್ಪದಿದ್ದಾಗ ರೂ.**50,000/-**ಗಳನ್ನು ಪಾವತಿಸಿ, ಅವರು ಪಡೆದಿದ್ದ ಚೆಕ್ಕನ್ನು ವಾಪಸ್ಸು ಪಡೆದು ರೂ.**50,000/-**ಗಳಿಗೆ ಚೆಕ್ ನಂ.**558418** ರಲ್ಲಿ ದಿನಾಂಕಃ**07.08.2023** ಮತ್ತು ರೂ.**2,00,000/-**ಗಳಿಗೆ ಚೆಕ್ ನಂ.**558419** ರಲ್ಲಿ ದಿನಾಂಕಃ**07.08.2023** ರ ರಾಮನಗರ ಶಾಖೆಯ ಕೆನರಾ ಬ್ಯಾಂಕಿಗೆ ಸೇರಿದ ಎರಡು ಚೆಕ್ಕುಗಳನ್ನು ನೀಡಿ ನಮೂದಿಸಿದ ದಿನಾಂಕದಂದು ಹಣವನ್ನು ಬ್ಯಾಂಕಿಗೆ ಹಾಕುವುದಾಗಿ ಹೇಳಿರುತ್ತೀರಿ. ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ**?**

ಉತ್ತರಃ

**4.** ಪ್ರಾ.ಸಾ.1 ರವರು ಮುಂದುವರೆದು ನುಡಿದಿರುವುದೇನೆಂದರೆ, ಅದರಂತೆ ಪಿರ್ಯಾದುದಾರರು ನೀವು ಕೊಟ್ಟಿರುವ ಎರಡು ಚೆಕ್ಕುಗಳನ್ನು ಅವರು ಖಾತೆ ಹೊಂದಿರುವ ಚನ್ನಪಟ್ಟಣ ಶಾಖೆಯ ಐಸಿಐಸಿಐ ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ, ಬ್ಯಾಂಕಿನವರು "**ಸಾಕಷ್ಟು ಹಣ ಇಲ್ಲ**" ಎಂಬ ಹಿಂಬರಹದೊಂದಿಗೆ

ಚೆಕ್ಕುಗಳನ್ನು ದಿನಾಂಕಃ**18.08.2023** ರಂದು ವಾಪಸ್ಸು ನೀಡಿರುತ್ತಾರೆ. ತದನಂತರ ಪಿರ್ಯಾದುದಾರರು ಈ ವಿಷಯವನ್ನು ತಿಳಿಸಿ ಹಣ ವಾಪಸ್ಸು ಮಾಡುವಂತೆ ಕೇಳಿಕೊಂಡಾಗ ನೀವು ಯಾವುದೇ ಹಣ ನೀಡದ ಕಾರಣ, ಅವರು ನಿಮಗೆ ವಕೀಲರ ಕಾನೂನು ತಿಳುವಳಿಕೆ ಪತ್ರವನ್ನು ದಿಃ**17.08.2023** ರಂದು ನೊಂದಾಯಿತ ಅಂಚೆ ಮೂಲಕ ನಿಮಗೆ ನೀಡಿದ್ದು, ಆರೋಪಿಯಾದ ನೀವು ನೋಟೀಸಿಗೆ ಯಾವುದೇ ಪ್ರತ್ಯುತ್ತರವನ್ನು ಕೊಟ್ಟಿರುವುದಿಲ್ಲ ಹಾಗೂ ಚೆಕ್ಕಿನ ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದಕಾರಣ ನೀವು ಕಲಂ.**138** ಎನ್.ಐ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

**5.** ನಿಮ್ಮ ಪರವಾಗಿ ಬೇರೆ ಏನಾದರೂ ಹೇಳುವುದು ಇದೆಯೇ?

ಉತ್ತರಃ

**6.** ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಇದೆಯೇ?

ಉತ್ತರಃ

**(ಮೇಲಿನ ಆರೋಪಿತನ ಹೇಳಿಕೆಯನ್ನು ಓದಿ ಹೇಳಿ, ಆತನು ನೀಡಿದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು. ಅದು ನಿಜ ಮತ್ತು ಸರಿಯಾಗಿದೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)**

**ಅಪರ ಸಿವಿಲ್ ಜಡ್ಜ್ ಮತ್ತು**

**ದಿನಾಂಕಃ 19.08.2024.** **ಜೆ.ಎಂ.ಎಫ್.ಸಿ., ಚನ್ನಪಟ್ಟಣ.**